ಕೆಮ್ಮಣ್ಣು ಗುಂಡಿ ಗಿರಿಧಾಮವನ್ನು ಪ್ರವಾಸಿ ಕೇಂದ್ರವನ್ನಾಗಿ ಪರಿವರ್ತಿಸುವುದು

೨೯೪೦. ಶ್ರೀ ಬಿ.ಆರ್. ನೀಲಕಂಠಪ್ಪ (ತರೀಕೆರೆ).—ಮಾನ್ಯ ವಾರ್ತಾ, ಪ್ರವಾಸೋದ್ಯಮ ಮತ್ತು ಕನ್ನಡ ಮತ್ತು ಸಂಸ್ಕೃತಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ತರೀಕೆರೆ ತಾಲ್ಲೂಕಿನ ಕೆಮ್ಮಣ್ಣುಗುಂಡಿ ಗಿರಿಧಾಮವನ್ನು ಪ್ರವಾಸಿ ಕೇಂದ್ರವನ್ನಾಗಿ ಪರಿವರ್ತಿಸುವ ಆಲೋಚನೆ ಇದೆಯೇ? ಹಾಗಿದ್ದಲ್ಲಿ, ಯಾವಾಗ ಮಾಡಲಾಗುವುದು?

ಆ) ಅದಕ್ಕೆ ಏನಾದರೂ ಯೋಜನೆ ರೂಪಿಸಲಾಗಿದೆಯೇ?

ಶ್ರೀ ಎಂ. ಪಿ. ಪ್ರಕಾಶ್ (ವಾರ್ತಾ, ಪ್ರವಾಸೋದ್ಯಮ ಮತ್ತು ಕನ್ನಡ ಮತ್ತು ಸಂಸ್ಕೃತಿ ಮಂತ್ರಿಗಳು)—

ಅ) ಕೆಮ್ಮಣ್ಣುಗುಂಡಿಯನ್ನು ಪ್ರವಾಸಿ ಕೇಂದ್ರವನ್ನಾಗಿ ಅಭಿವೃದ್ಧಿಪಡಿಸಲು ಗುರುತಿಸಲಾಗಿದೆ ಇದನ್ನು ಹಂತ ಹಂತದಲ್ಲಿ ಮಾಡಲಾಗುವುದು.

ಆ) ಇಲ್ಲ.

ತರೀಕೆರೆ ಪಟ್ಟಣಕ್ಕೆ ಒಳಚರಂಡಿ ಯೋಜನೆಯೆನ್ನು ಒದಗಿಸುವ ಬಗ್ಗೆ.

೨೯೪೨. ಶ್ರೀ ಬಿ. ಆರ್. ನೀಲಕಂಠಪ್ಪ (ತರೀಕೆರೆ).—ಮಾನ್ಯ ವಸತಿ ಹಾಗೂ ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ತರೀಕೆರೆ ಪಟ್ಟಣಕ್ಕೆ ಒಳಚರಂಡಿ ಯೋಜನೆ ಮಾಡುವ ಉದ್ದೇಶ ಸರ್ಕಾರದಲ್ಲಿದೆಯೇ?

ಆ) ಹಾಗಿದ್ದಲ್ಲಿ ಯಾವಾಗ ಮಾಡಲಾಗುವುದು ಹಾಗೂ ಈ ಬಾಬ್ತಿಗೆ ತಗುಲುವ ವೆಚ್ಚವೆಷ್ಟು?

ಶ್ರೀ ಆರ್. ವಿ. ದೇಶಪಾಂಡೆ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು).—

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಮಂಡಲ ಪಂಚಾಯತಿಗಳಿಗೆ ವೇತನ ಇತರೆ ಭತ್ಯೆಗಳ ವಿವರ

೪೦೮೯. ಶ್ರೀ ಬಿ. ಎ. ಉಮ್ಮರಬ್ಬ (ವಿಟ್ಲ),—ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ವಕ್ಫ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿರುವ ಒಟ್ಟು ಮಂಡಲ ಪಂಚಾಯತಿಗಳೆಷ್ಟು?

ಆ) ಮಂಡಲ ಪಂಚಾಯತಿಗಳ ಪ್ರಧಾನರು ಉಪ ಪ್ರಧಾನರು ಹಾಗೂ ಸದಸ್ಯರಿಂಗಳಿಗೆ ಇದುವರೆಗೆ ನೀಡಲಾಗಿರುವ ವೇತನ ಹಾಗೂ ಇತರ ಭತ್ಯೆಗಳ ಪ್ರತ್ಯೇಕ ವಿವರ ನೀಡುವುದು (ಮಂಡಲವಾರು ವಿವರ ನೀಡುವುದು).

ಶ್ರೀ ಅಬ್ದುಲ್ ನಜೀರ್ ಸಾಬ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ವಕ್ಫ್ ಮಂತ್ರಿಗಳು)—

ಅ) ರಾಜ್ಯದಲ್ಲಿ ಒಟ್ಟು ೨೨೪೯ ಮಂಡಲ ಪಂಚಾಯತ್‌ಗಳು ಹಾಗೂ ೬೭ ಮಧ್ಯಂತರ ಮಂಡಲ ಪಂಚಾಯತ್‌ಗಳು ಇವೆ.

ಆ) ಪ್ರಧಾನ ಮತ್ತು ಉಪ ಪ್ರಧಾನರಿಗೆ ಮಾಹೆಯಾನ ಕ್ರಮವಾಗಿ ರೂ. ೩೦೦ ಮತ್ತು ರೂ. ೧೫೦ ರೂ. ಗಳ ಸಂಬಳವನ್ನು ನೀಡಲಾಗುತ್ತಿದೆ. ಸದಸ್ಯರಿಗೆ ಪ್ರತಿ ಸಭೆಗೆ ಸಭೆ ಭತ್ಯೆ ಹದಿನೈದು ರೂ. ಗಳನ್ನು ನೀಡಲಾಗುತ್ತದೆ.